**Government of Karnataka**
**Deposition Sheet (R.P.N.57) Form 4 Criminal**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 374/2014 |

ದಿನಾಂಕ 02-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 9 ಪ್ರಾಸಾಃ5

| | |
|---|---|
| ಹೆಸರು | ಎಮ್ ಡಿ ಹುಸೇನಖಾನ್ |
| ತಂದೆಯ ಹೆಸರು | ಎಮ್ ಡಿ ಉಸ್ಮಾನ್ ಖಾನ್ |
| ವಯಸ್ಸು | 68 ವರ್ಷ |
| ಉದ್ಯೋಗ | ನಿವೃತ್ತ ಹೆಚ್ ಸಿ 96. ದೇವದುರ್ಗ ಪೋಲಿಸ್ ಠಾಣೆ |
| ವಾಸಸ್ಥಳ | ರಾಯಚೂರು |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ**

ನಾನು ದಿನಾಂಕ: 10-05-2010 ರಿಂದ 08-08-2015 ರವರೆಗೆ ದೇವದುರ್ಗ ಪೋಲಿಸ್ ಠಾಣೆಯಲ್ಲಿ ಹೆಚ್ ಸಿ -96 ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 18-05-2014 ರಂದು ರಾತ್ರಿ 9-00 ರಿಂದ ಬೆಳಿಗ್ಗೆ 8-00 ಗಂಟೆಯವರೆಗೆ ನಾನು ಠಾಣೆ ಕರ್ತವ್ಯದಲ್ಲಿದ್ದಾಗ, ರಾತ್ರಿ 9-15 ಗಂಟೆ ಸುಮಾರಿಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ, ಠಾಣಾ ರೈಟರ್ ಅವರಿಗೆ ಹೇಳಿಕೆ ದೂರನ್ನು ಟೈಪ್ ಮಾಡಿಸಿ ದೂರನ್ನು ಹಾಜರು ಪಡಿಸಿದ್ದು ಸದರಿ ದೂರನ್ನು ಪಡೆದುಕೊಂಡು, ನಾನು ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂಬರ್ 87/2014 ರಂತೆ ಭಾರತೀಯ ದಂಡ ಸಂಹಿತೆಯ ಕಲಂ 498(ಎ) 323, 504, 506 ಸಹವಾಚಕ 34 ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಅದರ ಪ್ರತಿಯನ್ನು ರವಾನಿಸಿರುತ್ತೇನೆ. ಸಾಕ್ಷಿ ಎಫ್ ಐ ಆರ್ ನೋಡಿ ಗುರುತಿಸಿದ್ದು ಅದನ್ನು ನಿ ಪಿ 3 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ ಪಿ 3 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದೆ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ನಂತರ ದಿನಾಂಕ: 19-05-2014 ರಂದು ಬೆಳಿಗ್ಗೆ 10-30 ರಿಂದ 11-30 ಗಂಟೆವರೆಗೆ ಪಂಚ ಸಾಕ್ಷಿದಾರರಾದ ಚಾಸಾ-2 ಮತ್ತು 3 ಇವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ ಸಾಕ್ಷಿದಾರರು ನೋಡಿ ಗುರುತಿಸಿದ್ದು ಈಗಾಗಲೇ ನಿ ಪಿ 2 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 2(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ: 07-06-2014 ರಂದು ಆರೋಪಿತರು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ರಾಯಚೂರ ದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ

ಹಾಜರಾಗಿದ್ದು ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರು ಇದ್ದು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಮುಂದಿನ ತನಿಖೆಗಾಗಿ ನಾನು ಕಡತವನ್ನು ಚಾಸಾ-10 ರವರಿಗೆ ವಹಿಸಿ ಕೊಟ್ಟಿರುತ್ತೇನೆ.

**ವಾಟೀಸವಾಲು ಶ್ರೀ ಸಿ ಆರ್ ಜೆ ವಕೀಲರಿಂದ: -**

**1.** ಪಂಚನಾಮೆ ಮಾಡುವ ಕಾಲಕ್ಕೆ ನನ್ನ ಜೊತೆ ರೈಟರ್ ಬಂದಿರುತ್ತಾರೆ. ಪಂಚನಾಮೆ ಮಾಡಲು ಮೇನ್ ರೋಡ್ ಮಾರ್ಗದ ಮೂಲಕ ಸ್ಥಳಕ್ಕೆ ಹೋಗಿರುತ್ತೇನೆ. ನಾವು ಸ್ಥಳಕ್ಕೆ ಹೋದಾಗ ಪಂಚರು ಸ್ಥಳದಲ್ಲೇ ಇದ್ದರು. ಪಂ ಚನಾಮೆ ಮಾಡಿದ ಜಾಗದ ಚಕ್ ಬಂದಿ ಪೂರ್ವ ದಿಕ್ಕಿಗೆ ಗಂಗಪ್ಪ ಇವರ ಖಾಲಿ ಜಾಗ, ಪಶ್ಚಿಮಕ್ಕೆ ಗಂಗಪ್ಪ ಇವರ ವಾಸದ ಮನೆ, ಉತ್ತರಕ್ಕೆ - 50 ಫೀಟ್ ಖಾಲಿ ಜಾಗ ಇರುತ್ತದೆ ದಕ್ಷಿಣಕ್ಕೆ ದೇವಸ್ಥಾನ ಇರುತ್ತದೆ. ಪಂಚನಾಮೆ ಮಾಡಿದ ಸ್ಥಳದಲ್ಲಿ ಯಾವುದೇ ವಸ್ತು ಜಪ್ತಿ ಮಾಡಿರುವುದಿಲ್ಲ. ನೀವು ದೂರುದಾರರಿಂದ ಯಾವುದೇ ಫಿರ್ಯಾದಿಯನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ.

2. ಆ ದಿನ ದೂರು ನೀಡಲು ಚಾಸಾ-1 ರವರು ಠಾಣೆಗೆ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ದೂರು ನೀಡಿದ ನಂತರ ಗುನ್ನೆ ಸ್ಥಳಕ್ಕೆ ಪಂಚನಾಮೆ ಮಾಡಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಮಾಡಿದ ನಂತರ ಪಂಚರಿಗೆ ಪಂಚನಾಮೆ ಓದಿ ಹೇಳಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದಿದ್ದರೂ ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ.ಇದೆ.
ಸಹಿ/-

ಪ್ರ.ದ.ನ್ಯಾ.ದಂ.ಗಳು, ದೇವದುರ್ಗ.